ಬೆಂಗಳೂರು – ಕೋಲಾರ ಹಾಲಿನ ಒಕ್ಕೂಟಗಳ ವಿಭಜನೆ

೧೬೬೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಪಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಹಾಲಿನ ಒಕ್ಕೂಟವು ಕೋಲಾರ – ಬೆಂಗಳೂರು ಒಕ್ಕೂಟಗಳೆಂದು ವಿಭಜನೆಯಾಗಿದ್ದಾದು ನಿಜವೇ ?

ಆ) ವಿಭಜನೆಯಿಂದಾಗಿ ನೌಕರರನ್ನು ವರ್ಗಾವಣೆ ಮಾಡುವಾಗ ಅನುಸರಿಸಿದ ನೀತಿ ಯಾವುದು ?

ಇ) ಬೆಂಗಳೂರಿನ ಒಕ್ಕೂಟದ ನೌಕರರಿಗೂ ಮತ್ತು ಕೋಲಾರ ಒಕ್ಕೂಟದ ನೌಕರರಿಗೂ ಸಂಬಳ ಮತ್ತು ಭತ್ಯೆಗಳ ವಿಷಯಗಳಲ್ಲಿ ತಾರತಮ್ಯವಿದೆಯೇ ? ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ನಿಜ.

ಆ) ಹುದ್ದೆಗಳ ಅವಶ್ಯಕತೆ ಮತ್ತು ಸದಸ್ಯ ಸಂಘಗಳ ಸಂಖ್ಯೆಗಳ ಆಧಾರದ ಮೇಲೆ ಎರಡೂ ಒಕ್ಕೂಟಗಳೊಳಗೆ ಹಂಚಿಕೊಳ್ಳಲಾಗಿದೆ.

ಇ) ಮೂಲ ವೇತನದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳನ್ನು ಕೆ.ಸಿ.ಎಸ್.ಆರ್.ನ ಪ್ರಕಾರ ನೀಡಲಾಗುತ್ತಿದೆ.

ಹೊರದೇಶಕ್ಕೆ ರಫ್ತಾಗುತ್ತಿರುವ ಗ್ರಾನೈಟ್ ಬಗ್ಗೆ.

೧೬೬೭. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಪಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿನ ಗ್ರಾನೈಟ್ ಗಣಿಗಳಿಂದ ಹೊರದೇಶಕ್ಕೆ ರಫ್ತಾಗುತ್ತಿರುವ ಗ್ರಾನೈಟ್ ಪ್ರಮಾಣವೆಷ್ಟು ? (ಟನ್ನುಗಳಲ್ಲಿ)

ಆ) ಗಣಿ ಪಡೆದಿರುವ ಪಾಸಗಿ ಜನರು ರಫ್ತು ಮಾಡಿರುವ ಗ್ರಾನೈಟ್ ಪ್ರಮಾಣವೆಷ್ಟು ?

ಇ) ಪರವಾನಗಿ ಪಡೆದಿರುವ ಗಣಿಗಳ ಪಾಸಗಿ ಮಾಲೀಕರ ಸಂಖ್ಯೆ ಎಷ್ಟು ?

ಶ್ರೀ ರಮೇಶ್ ಸಿ. ಜಿಗಜಿಣಗಿ, (ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು).—

ಅ) ಮೈಸೂರು ಖನಿಜ ನಿಯಮಿತ ವತಿಯಿಂದ ಸುಮಾರು ೪೯,೮೫೫ ಟನ್ ಶಿಲಾದಿಮ್ಮಿಗಳನ್ನು ಮತ್ತು ೧೭೫೮೮ ಘ. ಮೀ. ಪರಿಷ್ಕೃತಗೊಂಡ ಫಲಕಗಳನ್ನು ರಫ್ತು ಮಾಡಲಾಗಿದೆ.